2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**129/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಕೇಶ | ಪಿಡಬ್ಲೂ - 5 |
| ತಂದೆಯ ಹೆಸರು | - | ರಾಮೇಗೌಡ | ಸಿಡಬ್ಲೂ - 5 |
| ವಯಸ್ಸು | - | 29 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಹೀಚುವಳ್ಳಿ, ಹಳೇಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | |

ದಿನಾಂಕಃ 18-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ. ಪ್ರಾಸಾ.1 ರಘು ಮತ್ತು ಪ್ರಾಸಾ.2 ಪೂರ್ಣೇಶ್ ರವರು ಗೊತ್ತು ಅವರು ನಮ್ಮ ಊರಿನವರಾಗಬೇಕು.

2. ದಿಃ 23.02.2013 ರಂದು ಸುಮಾರು ಬೆಳಿಗ್ಗೆ 11 ಗಂಟೆಗೆ ನಾವು ನಮ್ಮ ಊರಿನ ಸರ್ವೆ ನಂಬರ್ 47 ರ ಜಾಗದಲ್ಲಿ ಸೇರಿದ್ದೆವು. ಗ್ರಾಮ ಲೆಕ್ಕಾಧಿಕಾರಿ ಮತ್ತು ಪೊಲೀಸರು ಸದರಿ ಜಾಗಕ್ಕೆ ಬಂದಿದ್ದರು ಮತ್ತು ಅಲ್ಲಿ ಕಾಫಿ ಕುಯಲ್ಲು ಮಾಡಲು ತಹಶೀಲ್ದಾರರ ಆದೇಶದಂತೆ ಕೃಷಿ ಕಾರ್ಮಿಕರು

ಬಂದಿದ್ದರು. ಆ ಸಮಯದಲ್ಲಿ ನಾನು, ಪ್ರಾಸಾ.1, ಪ್ರಾಸಾ.2, ಪ್ರಾಸಾ.3, ಸತೀಶ ಮತ್ತು ಮಡಿವಾಳ ಜನಾಂಗದ 3-4 ಮಹಿಳೆಯರು, ಗೋಪಾಲಶೆಟ್ಟರು ಮತ್ತು ಇತರರು ಸುಮಾರು ಜನ ಸೇರಿದ್ದರು.

3. ತಹಶೀಲ್ದಾರರ ಆದೇಶದಂತೆ ಕಾರ್ಮಿಕರು ಸರ್ವೆ ನಂಬರ್ 47 ರಲ್ಲಿ ಬೆಳೆದ ಕಾಫಿ ಕುಯ್ಯುಲು ಮಾಡುತ್ತಿರುವಾಗ 1 ನೇ ಆರೋಪಿಯು ಸ್ಥಳಕ್ಕೆ ತಮ್ಮ ವಾಹನದಲ್ಲಿ ಬಂದರು. 1 ನೇ ಆರೋಪಿ ಬಂದವರೇ ಏಕಾಏಕಿ ಪ್ರಾಸಾ.1 ರಘು ರವರನ್ನು ಉದ್ದೇಶಿಸಿ ಸೂಳೇ ಮಗನೆ, ಬೋಳಿ ಮಗನೆ ಎಂದು ಬೈದರು.

4. ನಂತರ 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಗಳಿಗೆ ಏನು ನೋಡುತ್ತಿದ್ದಿರೋ ಕತ್ತಿಗಳನ್ನು ತೆಗೆದುಕೊಂಡ ಬನ್ನಿ ಪ್ರಾಸಾ.1 ಈತನನ್ನು ಮುಗಿಸಿಬಿಡೋಣ ಎಂದು ಹೇಳಿದನು. ಅದರಂತೆ 4 ನೇ ಆರೋಪಿ ಮನೆಯಿಂದ 2 ಕತ್ತಿಗಳನ್ನು ತಂದರು. ಒಂದು ಕತ್ತಿಯನ್ನು 2 ನೇ ಆರೋಪಿ ಕೈಗೆ ಮತ್ತು ಇನ್ನೊಂದು ಕತ್ತಿಯನ್ನು 3 ನೇ ಆರೋಪಿ ಕೈಗೆ ಕೊಟ್ಟರು. ನಂತರ 4 ನೇ ಆರೋಪಿಯು ಪ್ರಾಸಾ.1 ರವರನ್ನು ಕಡಿ ಎಂದು ಹೇಳಿದರು. ನಂತರ ಆ ಸಮಯದಲ್ಲಿ 1 ನೇ ಆರೋಪಿ 2 ನೇ ಆರೋಪಿಯ ಕೈಯಲ್ಲಿ ಇದ್ದ ಕತ್ತಿಯನ್ನು ಕಿತ್ತುಕೊಂಡು ಪ್ರಾಸಾ.1 ರಘು ರವರನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕತ್ತಿಯಿಂದ ಅವರ ಕುತ್ತಿಗೆಗೆ ಕೊಚ್ಚಲು ಹೋದರು, ಆಗ ಪ್ರಾಸಾ.1 ರವರು ತಮ್ಮ ಕೈಯನ್ನು ಅಡ್ಡ ಮಾಡಿದಾಗ ಅವರ ಹೆಬ್ಬೆರಳು ಮತ್ತು ಮಧ್ಯೆ ಬರಳಿಗೆ ಬಲವಾದ ಪೆಟ್ಟಾಗಿ ರಕ್ತ ಬಂದಿರುತ್ತದೆ. ಆ ಸಮಯದಲ್ಲಿ ಪ್ರಾಸಾ.2 ಸದರಿ ಹಲ್ಲೆಯನ್ನು ತಡೆಯಲು ಹೋದಾಗ ಆತನಿಗೂ ಸಹ 2 ಮತ್ತು 3 ನೇ ಆರೋಪಿಗಳು ದೊಣ್ಣೆಯಿಂದ ಆತನ ಎಡಕೈಯ ಮಣಕಟ್ಟಿಗೆ ಮತ್ತು ಕಲ್ಲಿನಿಂದ ಆತನ ಪಾದಕ್ಕೆ ಹೊಡೆದಿರುತ್ತಾರೆ. ನಾನು ಸೇರಿದಂತೆ ಸತೀಶ, ರಜನಿಕಾಂತ ಮತ್ತು ವೆಂಕಟೇಶ್ ರವರು ಬಿಡಿಸಲು ಅವರನ್ನು ಹೋದಾಗ

ನಮ್ಮನ್ನು ಸಹ ತಳ್ಳಾಡಿರುತ್ತಾರೆ. ನಂತರ ಹಲ್ಲೆಯಿಂದ ಪ್ರಾಸಾ.1 ರವರನ್ನು ಬಿಡಿಸಿ ಅವರನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. 1 ನೇ ಆರೋಪಿ ಘಟನೆ ನಡೆದ ದಿನ ತಮ್ಮ ಕಾರಿನಿಂದ ನಮ್ಮ ಮೇಲೆ ಹತ್ತಿಸಲು ಬಂದರು. ಆ ಸಮಯದಲ್ಲಿ ಅವರ ಕಾರು ರಸ್ತೆ ಬದಿಯ ಗೆರೆಗೆ ತಾಗಿ ಕಾರಿನ ಹಿಂಭದಿ ಗ್ಲಾಸ್ ಹೊಡೆದು ಹೋಗಿರುತ್ತದೆ.

5. ಆರೋಪಿಗಳು ಪ್ರಾಸಾ.1 ರಘು, ಪ್ರಾಸಾ.2 ಪೂರ್ಣೇಶ್ ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

6. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 1 ನೇ ಆರೋಪಿಗಳೇ ಪ್ರಾಸಾ.1 ಮತ್ತು 2 ರವರ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – **1, 3** ಮತ್ತು **4** ನೇ ಆರೋಪಿತರ ಪರವಾಗಿ

7. ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಪಿ.ಯು.ಸಿ. ಪರೀಕ್ಷೆ ನಡೆದ ದಿನಾಂಕ ನೆನಪಿಲ್ಲ. ಘಟನೆ ನಡೆದ ದಿನ ಅಂದು ಯಾವ ದಿನ ಆಗಿತ್ತು ಎಂದರೆ ನನಗೆ ನೆನಪಿಲ್ಲ. ಹಳೇಕೆರೆ, ಮಡ್ಡಿಕೆರೆ ಮತ್ತು ಹೀಚುವಳ್ಳಿ ಗ್ರಾಮಗಳಲ್ಲಿ ಸುಮಾರು 150 ಮನೆಗಳು ಇರುತ್ತವೆ. ಸರ್ವೆ ನಂಬರ್ 47 ರಲ್ಲಿ ನನಗೇನಾದರು ಹಕ್ಕು ಇದೆ ಎಂದರೆ ಇಲ್ಲ. ನಾನು ಮಡಿವಾಳ ಜನಾಂಗಕ್ಕೆ ಸೇರಿದವನಲ್ಲ ಎಂದರೆ ಸರಿ. ಸರ್ವೆ

ನಂಬರ್ 47 ರಲ್ಲಿ ಮೃತ 2 ನೇ ಆರೋಪಿ ಗೆ ಸರ್ಕಾರದಿಂದ ಜಮೀನು ಮಂಜೂರಾಗಿದೆ ಎಂದರೆ ಸರಿ. ಸರ್ವೆ ನಂಬರ್ 47 ರಲ್ಲಿ ಒಟ್ಟು ಎಷ್ಟು ವಿಸ್ತಿರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ಮೃತ 2 ನೇ ಆರೋಪಿಯ ಮನೆಗೂ ಮತ್ತು ಘಟನೆ ನಡೆದ ಸ್ಥಳಕ್ಕೂ ಸುಮಾರು 100 ಅಡಿ ಅಂತರ ಇರಬಹುದು. ನನ್ನ ಮತ್ತು ಚಾಸಾ.1 ರಿಂದ 4 ರವರ ಮೇಲೆ 1 ನೇ ಆರೋಪಿಯವರ ಕಾರನ್ನು ಜಕುಂ ಮಾಡಿದ್ದರ ಕುರಿತು ಪ್ರಕರಣ ದಾಖಲಾಗಿದೆ ಎಂದರೆ ಸರಿ. ಘಟನೆ ನಡೆದ ದಿನ ಸುಮಾರು 15-16 ಜನ ಸೇರಿದ್ದರು. ಘಟನೆ ನಡೆದ ಸ್ಥಳದಲ್ಲಿ ಪ್ರಾಸಾ.1 ರವರು ಬೇಲಿಯಿಂದ ಹಾಚೆ ರಸ್ತೆಯ ಪಕ್ಕದಲ್ಲಿ ಇದ್ದರು. ನನಗೂ ಅವರಿಗೂ ಸುಮಾರು 20 ಅಡಿ ಅಂತರ ಇತ್ತು. ನಾನು ಸಹ ರಸ್ತೆಯಲ್ಲಿ ನಿಂತಿದ್ದೆನು. 1 ನೇ ಆರೋಪಿಗೆ ಟಾಟಾ ಸಫಾರಿ ಕಾರು ಇತ್ತು.

8. ಘಟನೆ ನಡೆದ ದಿನ 1 ನೇ ಆರೋಪಿಯು ಕತ್ತಿಯಿಂದ ಪ್ರಾಸಾ.1 ರವರ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ಪ್ರಾಸಾ.1 ರವರು ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಹಲ್ಲೆಯಿಂದ ಆತನ ಕೈ ಬೆರಳುಗಳಿಗೆ ರಕ್ತಗಾಯವಾಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕಾರನ್ನು 3-4 ಸಲ ಹಿಂದೆ ಮುಂದೆ ಚಲನೆ ಮಾಡಿದಾಗ ಹಿಂಭಾಗದ ಗ್ಲಾಸು ಗೆರೆಗೆ ತಾಗಿ ವಡೆದು ಹೋಗಿದ್ದು ಸುಳ್ಳು ನಾವು ಅದನ್ನು ವಡೆದು ಹಾಕಿದ್ದೇವೆ ಎಂದರೆ ಸರಿಯಲ್ಲ. ಮತ್ತು 1 ನೇ ಆರೋಪಿಯ ಮೇಲೆ ನಾವೆಲ್ಲರು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಘಟನೆ ನಡೆದ ಮಾರನೇ ದಿನ ಪೊಲೀಸರಿಗೆ ಮಹಜರ್ ಕಾಲಕ್ಕೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ. ಆದರೆ ನನ್ನ ಹೇಳಿಕೆಯಲ್ಲಿ ನಾನು ಸಹಿ ಮಾಡಿರುತ್ತೇನೆ.

9. ಕಂದಾಯ ಅಧಿಕಾರಿ ಮತ್ತು ಪೊಲೀಸರು ಘಟನೆ ಮುಗಿಯುವವರೆಗೂ ಸ್ಥಳದಲ್ಲಿ ಇದ್ದರು. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ.1 ಮತ್ತು 2 ಗಳು ಸಮಾನ್ಯವಾಗಿ ಕಾಫಿ ಬೆಳೆಯುವ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಮು.ಮಾ.1 ಮತ್ತು 2 ಗಳನ್ನು ಘಟನೆ ನಡೆದ ದಿನ ನೋಡಿದ್ದು ಬಿಟ್ಟರೆ ಈ ದಿನವೇ ನ್ಯಾಯಾಲಯದಲ್ಲಿ ನೋಡಿದ್ದೇನೆ ಎಂದರೆ ಸರಿ. ಘಟನೆ ನಡೆದ ದಿನ ಮು.ಮಾ.1 ಮತ್ತು 2 ಯಾರ ಯಾರ ಕೈಯಲ್ಲಿ ಇದ್ದವು ಎಂಬುದು ನನಗೆ ಹೇಳಲು ಬರುತ್ತದೆ. ಮು.ಮಾ.1 ದೊಡ್ಡ ಕತ್ತಿ ಮೃತ 2 ನೇ ಆರೋಪಿಯ ಕೈಯಲ್ಲಿ ಇತ್ತು. ಅದನ್ನೆ ಕಿತ್ತುಕೊಂಡು 1 ನೇ ಆರೋಪಿಯು ಪ್ರಾಸಾ.1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ಮು,ಮಾ.1 ರ ಮೇಲೆ ಯಾವುದೇ ವಿಶೇಷ ಗುರುತು ಮಾಡಿಕೊಂಡಿರಲಿಲ್ಲ. ಆದರೆ ಅದನ್ನು ನೋಡಿ ಅದೇ ಕತ್ತಿ ಎಂದು ಹೇಳಿದ್ದೇನೆ. ಸಮಾನ್ಯವಾಗಿ ಆ ರೀತಿ ಕತ್ತಿಗಳು ನಮ್ಮ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ನನಗೂ ಮತ್ತು 1 ನೇ ಆರೋಪಿ ಯವರಿಗೂ ವೈಮನಸ್ಸು ಇದೆ ಎಂದರೆ ಇಲ್ಲ. ಮಡ್ಡಿಕೆರೆ ಗ್ರಾಮಕ್ಕೆ ಹೋಗುವ ಹಳೆಯ ರಸ್ತೆಯನ್ನು ಹೊಸದಾಗಿ ಮಾಡಿರುತ್ತಾರೆ. ಮಡ್ಡಿಕೆರೆ ಗ್ರಾಮದ ಗ್ರಾಮಸ್ಥರ ನಡುವೆ ರಸ್ತೆಯ ವಿಚಾರವಾಗಿ ಸಿವಿಲ್ ದಾವೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ ಮತ್ತು ಪ್ರಾಸಾ.1 ರಘು ರವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾ